Regd No M 1299 Sri ಶಾಖೆ 11—10—51

SATYAVADI = 35th Year

ಸತ್ಯವಾದಿ

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ದಿವ್ಯವಾಣಿ

ಐಶ್ವರ್ಯಕ್ಕೆ ಒಳ್ಳೆಯತನ, ಪರಾಕ್ರಮಕ್ಕೆ ಹಠವಿದುವುದು, ತಿಳುವಳಿಕೆಗೆ ಸೈರಣೆ ಸದ್ವಂಶದಲ್ಲಿ ಹುಟ್ಟಿದುದಕ್ಕೆ ವಿನಯ, ಧನಕ್ಕೆ ದಾನ, ತಪಸ್ಸಿಗೆ ಶಾಂತಿ ಬಲಕ್ಕೆ ಪರಿಪೂರ್ಣ ಅಪರಾಧವನ್ನು ಮನ್ನಿಸುವುದು. ಧರ್ಮಕ್ಕೆ ಫಲಾಕಾಂಕ್ಷೆ ಇಲ್ಲದಿರುವುದು ಭೂಷಣ; ಇವೆಲ್ಲಕ್ಕೂ ಕಾರಣವಾದ ಶೀಲ ಉತ್ತಮ ಭೂಷಣ.

— ಸುಭಾಷಿತ

ಕನ್ನಡಿಗನ ಪ್ರಾರ್ಥನೆ

ಕನ್ನಡ ಮಹಾಲಕ್ಷ್ಮೀ, ತಾಯಿ ರೇಣುಕೆ
ಜಗದಂಬೆ ನಮೋ ಎಂಬೆ!
ಬನವೆ ತಿಂತಿಣಿಗಟ್ಟಿ ನಿನ್ನ ಪಾದಕ್ಕೆ
ಉಧೋ ಉಧೋ ಎನ್ನುತಿದೆ!
ಹೃದಯ ತುಂಬಿ ಹಬ್ಬಿರುವ ತಮವ
ಕಳೆಯೆ!
ಮುದವ ತುಂಬುವ ಆತ್ಮಜ್ಯೋತಿಯನು
ಬೆಳಗೆ!
ತುಳಿದು ಕ್ರುದ್ಧರನು, ಎತ್ತು ಒಡಬಡ್ದರನು
ಸಿದ್ಧಬುದ್ಧಿಯನು ಹುಟ್ಟಿಸೇಳು, ಏಳು
ತಾಯಿ!

ಓ ಮಹಾಸರಸ್ವತಿಯೆ, ಶೃಂಗೇರಿ ಶಾರದೆ
ಯೆ
ಶೃಂಗಗಿರಿ ಇಳಿದು ಬಾ ತಾಯಿ ಕನ್ನಡದ
ದೇವಿ
ಲೆಕ್ಕಣಿಕೆ ಬಿಟ್ಟಿಂದು ಕೂರಿಸಿಯು ಕೊಡು
ತಾಯಿ
ನಮ್ಮಲಸ ವಿಲಾಸವನು, ಭೋಗದಾಹ
ವನು
ನೀಗಿಸಮ್ಮ ತ್ಯಾಗಯೋಗವನೊರೆದು
ಓ ಮಂತ್ರ ಮಾತೆ, ಶಕ್ತಿದಾತೆ, ನಾವು
ಬರಿ ಯಂತ್ರಗಳು, ನೀನು ಯಂತ್ರಾ
ರೂಢೆ
ನಮ್ಮ ನಿಯಂತ್ರಿಸು, ತಾಯಿ ಬ್ರಹ್ಮಾಣಿ!

[ಶ್ರೀ ದೊಡ್ಡಮೇಟಿ ಅಂದಾನಪ್ಪ ನವರು ರಚಿಸಿರುವ 'ಪ್ರಾರ್ಥನೆ' ಯ ಮತ್ತು ಓ ನೇ ಪದ್ಯಗಳಿವು]

ಕ್ಷಯರೋಗ ನಿವಾರಣೆ

(ಪಂಡಿತ ಕೆ. ಪಿ. ಪುರಾಣಿಕ)

ಭಾರತದ ಆರೋಗ್ಯ ಮಂತ್ರಿಗಳು ರೇಡಿಯೋ ಭಾಷಣವನ್ನು ಮಾಡುತ್ತಾ ಕ್ಷಯ ರೋಗ ನಿವಾರಣಾ ಕಾರ್ಯದಲ್ಲಿ ಸಂಕಲ್ಪದವರು ತೀವ್ರ ಶಕ್ತಿಯಿಂದ ಇರುವುದಾಗಿಯೂ, ಬಿ ಸಿ ಜಿ ಚುಚ್ಚುವುದು ಕ್ಷಯ ರೋಗದ ಆಸ್ಪತ್ರೆಗಳನ್ನು ಹೆಚ್ಚಿಸುವುದು ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತಿವೆಯೆಂದೂ ಹೇಳಿದರು ಜನಗಳ ರೋಗ ನಿವಾರಣಾ ಕಾರ್ಯದಲ್ಲಿ ಸರಕಾರದವರು ಶಕ್ತಿ ವಹಿಸದೇ ಹೋದರೆ ಇನ್ಯಾರು ಮಾಡಬೇಕು!

ಜನಗಳು ಬಡತನದಿಂದ ನರಳುತ್ತಾ ಇದ್ದು ಸಾಕಷ್ಟು ಸರಿಯಾದ ಆಹಾರ ವಿಲ್ಲದಿರುವುದರಿಂದಲೂ, ಕಾಫಿ, ಟೀ, ಸಿನಿಮಾ ಇತ್ಯಾದಿಗಳ ದುಂಭ್ಯಾಸವು ಜನಗಳಲ್ಲಿ ಹೆಚ್ಚುತ್ತಾ ಇರುವುದರಿಂದಲೂ ಪಾಶ್ಚಾತ್ಯ ಚಿಕಿತ್ಸಾ ಪದ್ಧತಿಯು ಪ್ರಭಾವವಾಗಿಯೂ ಭಾರತದಲ್ಲಿ ಕ್ಷಯರೋಗವು ಬೆಳೆಯುತ್ತಾ ಬಂದಿದೆ ; ಈ ರೋಗದ ನಿವಾರಣೆಗೆ ಮುಖ್ಯ ಕಾರಣಗಳನ್ನು ಪರಿಹರಿಸುವುದು ಅಗತ್ಯವೇ ಹೊರತು ಬಿ ಸಿ ಜಿ ಚುಚ್ಚುವುದರಿಂದಾಗಲೀ, ಆಸ್ಪತ್ರೆಗಳನ್ನು ಹೆಚ್ಚಿಸುವುದರಿಂದಾಗಲೀ ಕ್ಷಯ ರೋಗ ನಿವಾರಣೆಯು ಫಲಕಾರಿಯಾಗದು ; ಮೂಲ ಕಾರಣಗಳನ್ನು ನಿವಾರಣೆ ಮಾಡಿದರೆ ಆಸ್ಪತ್ರೆಗಳಿಗೂ ವ್ಯಾಕ್ಸಿನ್‌ಗಳಿಗೂ ಹಣವನ್ನು ನೆಚ್ಚಬೇಕಾಗಿಲ್ಲ.

ಕೇಂದ್ರ ಆರೋಗ್ಯ ಮಂತ್ರಿಗಳು ಇಂಗ್ಲೆಂಡಿನಲ್ಲಿದ್ದಾಗ ಅಲ್ಲಿಯ ಔಷಧ ನಿರ್ಮಾಪಕರೆಲ್ಲರೂ ಸೇರಿ ಮಂತ್ರಿಗಳಿಗೊಂದು ಸತ್ಕಾರ ಕೂಟವನ್ನು ಮಾಡಿದರು ; ಅವರು ತಯಾರಿಸಿದ ಔಷಧಗಳಿಗೆಲ್ಲಾ ಗಿರಾಕಿಗಳನ್ನು ಮಾಡಿಕೊಡುವುದಾಗಿ ನಮ್ಮ ಮಂತ್ರಿಗಳು ಭರವಸೆಯನ್ನಿದ್ದಾರೆ ; ಆದುದರಿಂದ ಭಾರತದ ಜನಗಳ ಕ್ಷಯ ರೋಗ ನಿವಾರಣೆಯಲ್ಲಿ ತೀರ್ವಾಸಕ್ತಿ ಹುಟ್ಟಿದೆ.

ಕಾಶ್ಮೀರವನ್ನು ಎರಡು ಭಾಗವಾಗಿ ಮಾಡಬೇಕು ?

ಪ್ರಮುಖ ಸುದ್ದಿಗಳು

ನವದೆಹಲಿಯಲ್ಲಿ ಭಾರತ ನಿಮ್ನ ವರ್ಗದ ಅಧ್ಯಕ್ಷ ರಾಜಭೋಜರು ಹೇಳಿಕೆ ಇತ್ತು, ಕಾಂಗ್ರೆಸ್ ರಾಜ್ಯಭಾರದಿಂದ ಆಗಿರುವ ರಾಷ್ಟ್ರದ ಅಧೋಪತನವನ್ನು ತಡೆಯಲು ತಮ್ಮ ಪಕ್ಷ ಕಾರ್ಯೋನ್ಮುಖವಾಗುವದೆಂದಿರುವರು.

ಹೈದರಾಬಾದಿನಲ್ಲಿ ಫರ್ಕ್ಯೂ—ಜಿರ್ಗಾ ಇ—ಹಿಂದಿನ ಅಧ್ಯಕ್ಷ ಅಕ್ಬರ್ ಖಾನರು ಮೊನ್ನೆ ಹೇಳಿಕೆಯಿತ್ತು, ಪಠಾಣರ ಪ್ರಗತಿಗೆ ಸ್ವತಂತ್ರ ಪಠಾಣಸ್ಥಾನ ಅಗತ್ಯವೆಂದಿರುವರು

ಬೆಂಗಳೂರಿನಲ್ಲಿ ಮೊನ್ನೆ ಮೊನ್ನೆ ಸೆರ್ವೆ ಸೌದೆ ಸಾಗಿಸಿಕೊಂಡು ರಾತ್ರಿವೇಳೆ ರಹದಾರಿಯಿಲ್ಲದೆ ಲಾರಿ ಓಡಿದ್ದನ್ನು ಪೋಲೀಸರು ಪತ್ತೆ ಮಾಡಿದ್ದಾರೆ ಅದೆ ಲಾರಿಯಲ್ಲಿ ಸೌದೆ ಇಲಾಖೆಯ ಇನ್ಸ್‌ಪೆಕ್ಟರು ಕುಳಿತಿದ್ದರಂತೆ !

ಬೆಂಗಳೂರು, ಕೋಲಾರ, ತುಮಕೂರು ಜಿಲ್ಲಾಧಿಕಾರಿಗಳನ್ನು ಮಹಾರಾಜರು ಕರ್ನಿ ಆಹಾರ ಪರಿಸ್ಥಿತಿ ಕುರಿತು ಚರ್ಚಿಸಿ, ಸೂಕ್ತ ಪರಿಹಾರ ಒದಗಿಸಬೇಕೆಂದು ತಿಳಿಸಿದರು.

ಚುನಾವಣಾ ಘೋಷಣೆ

ಅಖಿಲ ಭಾರತ ನಿಮ್ನ ವರ್ಗ ಸಂಸ್ಥೆ ಚುನಾವಣಾ ಘೋಷಣೆ ಪ್ರಕಟಿಸಿದೆ. ಹಿಂದೂಗಳು ಹೆಚ್ಚಿರುವ ಭಾಗವನ್ನು ಹಿಂದೂಗಳಿಗೂ, ಮುಸ್ಲಿಮರು ಹೆಚ್ಚಾಗಿರುವ ಭಾಗವನ್ನು ಪಾಕಿಸ್ತಾನಕ್ಕೂ ಕಾಶ್ಮೀರವನ್ನು ವಿಭಜಿಸಿ ಹಂಚಬೇಕೆಂದೂ ಆ ಸಂಸ್ಥೆ ಒತ್ತಾಯಮಾಡಿದೆ ಆ ಸಂಸ್ಥೆ ಪಾಸಪ್ರತಿಬಂಧಕವನ್ನು ವಜಾ ಮಾಡುವದಾಗಿ ತಿಳಿಸಿದೆ.

ಒಪ್ಪಂದ ರದ್ದು

ಬ್ರಿಟಿಷ—ಈಜಿಪ್ಟಿನ ಒಡಂಬಡಿಕೆಯನ್ನು ಈಜಿಪ್ಟು ರದ್ದುಗೊಳಿಸಿದ್ದರ ವಿಷಯದಲ್ಲಿ ಈಜಿಪ್ಟಿನ ಜನತೆ ತೀವ್ರ ಆನಂದ ಭರಿತರಾಗಿರುವರು. ಕೈರೋ ಮತ್ತಿತರ ಸ್ಥಳಗಳಲ್ಲಿ ಶಾಂತಿಭಂಗವಿಲ್ಲದೆ ಸ್ವದರ್ಶನಗಳಾದವು.

ಸಮಾನ ಸ್ಥಾನ

ಮಧ್ಯಪಾಶ್ಚಾತ್ಯದ ರಕ್ಷಣಾ ವ್ಯವಸ್ಥೆಯಲ್ಲಿ ಈಜಿಪ್ಟಿಗೆ ಸರಿಸಮಾನ ಸ್ಥಾನ ಕಲ್ಪಿಸುವದಾಗಿ ಕೈರೋ ವಾರ್ತೆ.

ಶಾಸನ ಸಭೆ

ಮೈಸೂರು — ಶಾಸನ ಸಭೆಯು ೩ನೇ ದಿನದ ಕಾರ್ಯಕಲಾಪಗಳು ಕ್ರಾಫರ್ಡ್ ಭವನದಲ್ಲಿ ಈ ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾಯಿತು.

— ವಿಶ್ವ ಕುಟುಂಬಿ ಬಾಪೂ —

ಬಾಪು ವಿಶ್ವಕುಟುಂಬಿಯಾಗಿದ್ದರು : ಅವರಿಗೆ ಎಲ್ಲರೂ ಬೇಕು ; ಎಲ್ಲವೂ ಬೇಕು ; ಅವರ ವ್ಯವಹಾರ ನಿತ್ಯ ಶತಾವಧಾನವಾಗಿದ್ದಂತೆ. ಹತ್ತು ನಿಟ್ಟಿಗೆ ದಶರಥ ಚಕ್ರವರ್ತಿ ತನ್ನ ರಥ ಓಡಿಸುತ್ತಿದ್ದನಂತೆ ; ಅದೂ ಒಂದು ಪರಾಕ್ರಮವೇ. ಬಾಪೂ ಕೋಟಿ ದಿಕ್ಕಿನಲ್ಲಿ ತನ್ನ ಮನಸ್ಸನ್ನು ಹರಿಸುತ್ತಿದ್ದರು : ಕೋಟಿ ಸಂಬಂಧ ಬೆಳೆಸುತ್ತಿದ್ದರು ; ಅವರು ದಿನ ಬೆಳಗಾಗ ಗಾಳಿ ಸಂಚಾರ ಹೊರಡುತ್ತಿದ್ದರು : ಅವರ ಹಿಂದೆ ಆಗ ಹತ್ತಾರು ಮಂದಿ ಇರುತ್ತಿದ್ದರು ದಿನವೂ ಪ್ರಪಂಚದ ನಾನಾ ಮೂಲೆಗಳಿಂದ ಜನ ನೋಡಲು ಬರುತ್ತಿದ್ದರು ; ಒಬ್ಬೊಬ್ಬರದು ಒಂದು ಸಮಸ್ಯೆ; ಎಲ್ಲರಿಗೂ ಸಾವಧಾನವಾದ ಸಮಾಧಾನ ಹೇಳುತ್ತಿದ್ದರು.

ಹಿಂದೆ ಒಮ್ಮೆ ಚೀನಾ ದೇಶದ ಪ್ರತಿನಿಧಿಯಾಗಿ ತೈ ಚಿ ತಾ ಸೇವಾಗ್ರಾಮಕ್ಕೆ ಬಂದಿದ್ದರು ; ಗಾಂಧೀಜಿ ಅವರಿಗೂ ಅವರೊಡನೆ ಬಂದಿದ್ದವರಿಗೂ ಖಾದೀ ಅಹಿಂಸೆ ಸಂದೇಶಗಳನ್ನು ಹೇಳಿದರು ; ಹೊರಟು ಬರುವಾಗ ತೈ ಚಿ ತಾ ಗಾಂಧೀಜೀಗೆ ದೀರ್ಘಾಯುವನ್ನು ಕೋರಿದರು.

' ಚೀನದ ಯೋಗಕ್ಷೇಮಕ್ಕಾಗಿ, ಹಿಂದೂಸ್ಥಾನದ ಯೋಗಕ್ಷೇಮಕ್ಕಾಗಿ ನಿಮಗೆ ದೀರ್ಘಾಯುವಿರಲಿ ಎಂದು ಬೇಡುತ್ತೇನೆ ' ಎಂದರು.

ಗಾಂಧೀಜೀ ನಗುತ್ತಾ ' ನನ್ನ ಕುಟುಂಬ ದೊಡ್ಡದು : ೩೫ ಕೋಟಿ ಜನರದು ' ಎಂದರು ತೈ ಚಿ ತಾ ಮುಂದುವರಿಸಿ ' ಏಕೆ, ಇಡೀ ಮಾನವ ಕೋಟಿಯೇ ನಿಮ್ಮ ಕುಟುಂಬ ' ಎಂದರು.

' ನಿಜ, ಈ ೩೫ ಕೋಟಿ ಕುಟುಂಬದ ಯೋಗಕ್ಷೇಮವನ್ನು ನಾನು ಹೊರಿಟಲ್ಲೆನಾದರೆ, ನೀವು ಹೇಳಿದಹಾಗೂ ಆದೀತು ' ಎಂದರು ಗಾಂಧೀಜೀ.

ಗಾಂಧೀಜಿಯ ಉದಾತ್ತ, ಹಿರಿಯ ಮನಸ್ಸು ಎಲ್ಲೆ ವಿಸ್ತರಿಸುವುದಾಗಿತ್ತು ; ಅವರ ಪ್ರೀತಿ ವಿಶ್ವವ್ಯಾಪ್ತಿಯಾಗಿತ್ತು.

— ಶುಭ

ಮೈಸೂರು ವರ್ತಮಾನ

ಜಂಬೂಸವಾರಿ

ಮೈಸೂರು — ಶ್ರೀಮನ್ಮಹಾರಾಜರವರ ಜಂಬೂಸವಾರಿ ಮಹೋತ್ಸವ ನಿನ್ನೆ ವೈಭವದಿಂದ ನೆರವೇರಿತು. ಜಂಬೂಸವಾರಿ ಉತ್ಸವ ನೋಡಲು ಹಿಂದಿನ ಬಾರಿಗಿಂತ ಈ ಬಾರಿ ಜನ ಹೆಚ್ಚಾಗಿದ್ದರು.

ಬಾಡಿಗೆ ಇಳಿಯಿತು

ಮೈಸೂರು — ಪೌರಸಭೆ ನಗರದ ನಾನಾ ಮಾರ್ಕೆಟ್‌ಗಳ ಮಳಿಗೆಗಳಿಗೆ ಬಾಡಿಗೆ ಹೆಚ್ಚು ಮಾಡಿರುವುದರಲ್ಲಿ ಶೇಕಡ 50 ರಷ್ಟು ಕಡಿಮೆ ಮಾಡಬೇಕೆಂಬ ನಿರ್ಣಯವನ್ನು ಈಬೆಳಿಗ್ಗೆ ಶ್ರೀ ಟಿ ನರಸಿಂಹಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಸೇರಿದ್ದ ಪೌರಸಭೆಯ ಮುಂದುವರಿದ ಅಧಿವೇಶನದಲ್ಲಿ ಶ್ರೀ ಕೆ. ಪುಟ್ಟಸ್ವಾಮಿಯವರಿಂದ ಮಂಡಿಸಲ್ಪಟ್ಟು ಸರ್ವಾನುಮತದಿಂದ ಅಂಗೀಕೃತವಾಯಿತು.

ರಣಜಿತ್

ಅಮೋಘ 2 ನೇ ವಾರ

ಶಬಿನ್ತಾನ್

ಮನಮೋಹನ ಹಿಂದಿ ಚಿತ್ರ

ಪಾತ್ರ: ಶಾ೦, ನಸೀಂ, ಸಪ್ರೂ, ಕಕ್ಕೂ

ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 6-10-51 ರಿಂದ

ಮಿನಾ ಬಜಾರ್

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಸತ್ಯವಾದಿ ಸೋಮವಾರ ಸಂಚಿಕೆ

ವಾರ್ಷಿಕ ಚಂದಾ

ಅಂಚೆವೆಚ್ಚ ಸಮೇತ 1-14-0

SATYAVADI

Advt Rate, Casual

Rs 2 per Col Inch

"ಗೋರಕ್ಷಣಿ"

ಕಾರ್ಯ ಎಲ್ಲೆಲ್ಲೂ ನಡೆಯಲಿ

Protect the Cow

12-10-51 ರಿಂದ ಅಮೋಘ ಪ್ರಾರಂಭ

ಚಾಮುಂಡೇಶ್ವರಿ ಮತ್ತು ಗಣೇಶ ಟಾಕೀಸುಗಳಲ್ಲಿ

ಸುಖಸಂಪತ್ ಚಿತ್ರಪಥದವರ ಮಹೋನ್ನತ ಪೌರಾಣಿಕ ಚಿತ್ರ

ತಿಲೋತ್ತಮೆ (ಕನ್ನಡ)

ಭೂಮಿಕೆ— ಜಯಶ್ರೀ, ಬಿ. ಆರ್. ಸ್ವಾಮಿಯವರ, ಕಲಾವಿಶಾರದ ಕೊಟ್ಟೂರಪ್ಪ

ನಿರ್ದೇಶನ— ಆರ್. ಎಂ. ವೀರಭದ್ರಯ್ಯ. [ಪ್ರತಿ ದಿನ 3 ಆಟಗಳು]

SUKH SAMPATH CHITRAPAT Release

Asoka Road, Mysore

Mysore Dasara Exhibition

Cheap and wholesome Non-Rationed Foods

The All-India Women's Food Council (Mysore Branch) in cooperation with the Central Food Technological Research Institute, Mysore, is popularising a number of cheap and wholesome non-rationed food articles. Preparations like Halva made out of Tapioca Soji, Masala-Vade of dals and groundnut, Vangi Bhath, Kesari Bhath prepared out of the synthetic food grains, aerated ginger drink, fruit juices and other food products of the Mysore Food Institute are being greatly appreciated by the public. The demand for the above-mentioned non-rationed articles has increased considerably from the first day of the Exhibition owing to their very low cost. Methods of preperation of the food articles are also explained to the public. The production of synthetic grains, groundnut milk, prepartion of fruit juices and methods of storage of grains, fruits and vegetables are demonstrated at the Institute Stall specially put up for the purpose at the invitation of the Mysore Dasara Exeibition Committee. Visitors can thus actually see the food processes which are demonstrated every morning & evening at the Institute Stall and sample the products at the 'Annapurna' Cafateria of the All India Women's Food Council on the Mysore Dasara Exhibition Grounds.

ಅಪೇರ—

ಜಯಪ್ರದ 2 ನೆ ವಾರ

ನರ್ವಾಧಿಕಾರಿ

ಮಹೋನ್ನತ ತಮಿಳು ಚಿತ್ರ

ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಂದ್ರ್, ನಂಬಿಯಾರ್

ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 11-10-51 ರಿಂದ

ಷಾದಿ ಕಿ ರಾತ್ (ಹಿಂದಿ)

ಮೋತಿಲಾಲ್

5-10-51 ರಿಂದ

ನಿಮ್ಮಿ, ಶೇಖರ್, ಸುಲೋಚನ ಚಟರ್ಜಿ

ಪಾತ್ರವಹಿಸಿರುವ

ಬಡೀ ಬಹು

ಅಮೋಘ ಹಿಂದಿ ಚಿತ್ರ ದಿನ 3 ಆಟಗಳು

ಬೆಳಗಿನ ಪ್ರದರ್ಶನ 10-10-51 ರಿಂದ

ಅನ್ಮೋಲ್ ಘಡಿ (ಹಿಂದಿ)

ಉಡ್‌ಲಾಂಡ್

ಶಿನ

5-10-51 ರಿಂದ

ಪ್ರತಿ ಸಂಸಾರವೂ ನೋಡಲೇಬೇಕಾದ

ಅಮೋಘ ಪೌರಾಣಿಕ ಹಿಂದಿ ಚಿತ್ರ

ಶ್ರೀ ಗಣೇಶ ಜನ್ಮ

ನಿರೂಪ ರಾಯ್, ತ್ರಿಲೋಕ್ ಕಪೂರ್

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ತಾ|| 10 ರಿಂದ

— ಅಬಿಡಾ —

Edited, Printed and Published by Dharma Prachara Nirata M. S. Krishna Rao, at the Satyavadi Press Chamrajpuram Mysore